**4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 179/2015** **ದಿನಾಂಕಃ 22-05.2025**

**ಸಿ ಡಬ್ಲೂ : 7**

**ಪಿ ಡಬ್ಲೂ : 4**

-------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಸಿ ಆರ ಮೇತ್ರಿ |
| ಗಂಡ/ ತಂದೆಯ ಹೆಸರು | ಆರ ಮೇತ್ರಿ |
| ವಯಸ್ಸು | 48 ವರ್ಷ |
| ಉದ್ಯೋಗ | ವೈದ್ಯಾಧಿಕಾರಿ |
| ವಾಸಸ್ಥಳ | ಸಾಃ ಅಥಣಿ |

**<u>ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2014ರಿಂದ ಇವತ್ತಿನವರೆಗೂ ಅಥಣಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ದಿ 20.11.2014 ರಂದು ಚಾಸಾ 1 ರವರು ನಮ್ಮ ಆಸ್ಪತ್ರೆಗೆ ಯಾರೋ ಅವರ ಮೇಲೆ ಹಲ್ಲೆ ಮಾಡಿದ್ದಾರೆಂದು ಉಪಚಾರ ಪಡೆಯಲು ನಮ್ಮ ಆಸ್ಪತ್ರೆಗೆ ಸಂಜೆ 7.15ಕ್ಕೆ ಬಂದಿದ್ದರು. ಸದರಿಯವರಿಗೆ ಎದೆಯ ಎಡಬಾಗದಲ್ಲಿ ಗಾಯ 10X ½ X ½ cm. ರಷ್ಟು ಗಾಯ ಇತ್ತು. ಎಡಗಡೆ ಬುಜದ ಹಿಂದೆ 10X ½ X ½ cm. ರಷ್ಟು ಗಾಯ ಇತ್ತು. ಎಡಗಡೆ ಬುಜದ ಮೇಲೆ ತೆರಚಿದ ಗಾಯ ಇತ್ತು. ಬಲಗಡೆ ಮುಂಗೈಯಲ್ಲಿ (wrist) ಒಳಪೆಟ್ಟು ಆಗಿತ್ತು . ನಾನು ಚಾಸಾ 1 ರವರಿಗೆ ಉಪಚರಿಸಿದಾಗ 1 ರಿಂದ 4 ಗಾಯಗಳು ಸಾದಾರಣ ಸ್ವರೂಪದ ಗಾಯಗಳಾಗಿ ಕಂಡುಬಂದಿರುತ್ತವೆ. ಸದರಿ ಗಾಯಗಳು ಸುಮಾರು 1 ರಿಂದ 3 ತಾಸುಗಳ ಹಿಂದೆ ಉಂಟಾಗಿರುತ್ತವೆ. ದಿ.20.11.2014ರಂದು ನಾನು ಗಾಯದ ಸರ್ಟಿಫಿಕೇಟ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಗಾಯದ ಪ್ರಮಾಣಪತ್ರದ ಮೇಲಿನ ಸಾಕ್ಷಿ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ . ಎಸ ಜಿ ಪಿ  ವಕೀಲರಿಂದಃ**

ಗಾಯಾಳುಗಳು ಯಾವ ದಿನಾಂಕದಂದು ಹಾಗೂ ಯಾವ ಸಮಯದಂದು ಆಸ್ಪತ್ರೆಗೆ ಬಂದಿದ್ದಾರೆಂದು ತೋರಿಸಲು ರಜಿಸ್ಟರ ನಿರ್ವಹಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ಸಹ ಗಾಯಾಳುಗಳ ಮಾಹಿತಿಯನ್ನೊಳಗೊಂಡ ರಜಿಸ್ಟರ ನಿರ್ವಹಿಸಿರುತ್ತೇನೆ. ಸದರಿ ಪ್ರಕರಣದ ಗಾಯಾಳುಗಳು ಆಸ್ಪತ್ರೆಗೆ ಬಂದಿದ್ದರ ಬಗ್ಗೆ ಮಾಹಿತಿಯನ್ನು ನಾನು ರಜಿಸ್ಟರ ನೋಡಿದರೆ ಹೇಳುತ್ತೇನೆ. ಆದರೆ ಈಗ ನನಗೆ ಹೇಳಲಾಗುತ್ತಿಲ್ಲ. ಚಾಸಾ 1 ರವರಿಗೆ ಉಂಟಾದ ಗಾಯಗಳು ಮಹಡಿಯ ಮೇಲಿಂದ ಜಾರಿ ಬಿದ್ದರೆ ಚೂಪಾದ ಕಲ್ಲು ಅಥವಾ ಕಬ್ಬಿಣದ ವಸ್ತುಗಳ ಮೇಲೆ ಬಿದ್ದರೆ ಅಂತಹ ಗಾಯಗಳು ಉಂಟಾಗುವ ಸಾದ್ಯತೆ ಇದೆ. ಗಾಯಗಳನ್ನು ನೋಡಿದಾಗ ನಿರ್ದಿಷ್ಟವಾಗಿ ಇದೇ ವಸ್ತುವಿನಿಂದ ಸದರಿ ಗಾಯಗಳು ಉಂಟಾಗಿವೆ ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ಚೂಪಾದ ಅಥವಾ ಮಂಡಾದ ವಸ್ತುಗಳಿಂದ ಆಗಿದೆ ಎಂದು ಗುರುತಿಸಬಹುದು. ಗಾಯ ಪ್ರಮಾಣಪತ್ರ ನೀಡುವಾಗ ರಜಿಸ್ಟರನಲ್ಲಿ ಇನವರ್ಡ ಮತ್ತು ಔಟವರ್ಡ ನಂಬರ ಹಾಕಿ ಕೊಡಬೇಕಾಗುತ್ತದೆ. ಆದರೆ ಸದರಿ ನಿಶಾನೆ 3 ಇದಕ್ಕೆ ಔಟವರ್ಡ ನಂಬರ ಹಾಕಿರುವುದಿಲ್ಲ ಎಂದರೆ ಸರಿ . ಪೋಲಿಸರು ಕೇಳಿದ್ದರಿಂದ ಖೊಟ್ಟಿ ಗಾಯದ ಪ್ರಮಾಣಪತ್ರ ವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಚಿಕಿತ್ಸೆ ನೀಡದಿದ್ದರೂ ಚಿಕಿತ್ಸೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.